**SET – 4**

**Series : TYM**

**Code No. 13**

रोल नं.
**Roll No.** | | | | | | | |

Candidates must write the Code on the title page of the answer-book.

- Please check that this question paper contains **8** printed pages.
- Code number given on the right hand side of the question paper should be written on the title page of the answer-book by the candidate.
- Please check that this question paper contains **9** questions.
- **Please write down the Serial Number of the question before attempting it.**
- 15 minute time has been allotted to read this question paper. The question paper will be distributed at 10.15 a.m. From 10.15 a.m. to 10.30 a.m., the students will read the question paper only and will not write any answer on the answer-book during this period.
- ಈ ಪ್ರಶ್ನೆಪತ್ರಿಕೆಯಲ್ಲಿ **8** ಮುದ್ರಿತ ಪುಟಗಳಿವೆಯೆಂಬುದನ್ನು ಪರಿಶೀಲಿಸಿ.
- ಪ್ರಶ್ನೆಪತ್ರಿಕೆಯ ಬಲಭಾಗದಲ್ಲಿ ಕೊಟ್ಟಿರುವ ಕೋಡ್ ಸಂಖ್ಯೆಯನ್ನು ಉತ್ತರಪತ್ರಿಕೆಯ ಮುಖಪುಟದಲ್ಲಿ ಅಭ್ಯರ್ಥಿಯು ಬರೆಯಬೇಕು.
- ಈ ಪ್ರಶ್ನೆಪತ್ರಿಕೆಯಲ್ಲಿ **9** ಪ್ರಶ್ನೆಗಳಿವೆ ಎಂಬುದನ್ನು ಗಮನಿಸಿ.
- **ಉತ್ತರಿಸುವುದಕ್ಕೆ ಮೊದಲು ಪ್ರಶ್ನೆಯ ಕ್ರಮಸಂಖ್ಯೆಯನ್ನು ಬರೆಯಿರಿ.**
- ಈ ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳನ್ನು ಕೊಡಲಾಗಿದೆ. ಪ್ರಶ್ನೆಪತ್ರಿಕೆಯನ್ನು 10.15 a.m. ಗೆ ವಿತರಿಸಲಾಗುವುದು. 10.15 a.m. ನಿಂದ 10.30 a.m., ವರೆಗೆ ವಿದ್ಯಾರ್ಥಿಗಳು ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಬೇಕು ಮತ್ತು ಈ ಅವಧಿಯಲ್ಲಿ ಯಾವುದೇ ಉತ್ತರವನ್ನು ಉತ್ತರಪತ್ರಿಕೆಯಲ್ಲಿ ಬರೆಯಬಾರದು.

# ಕನ್ನಡ

# KANNADA

**ಅನುಮತಿಸಲಾದ ಸಮಯ : 3 ಗಂಟೆ** | **ಗರಿಷ್ಠ ಅಂಕಗಳು : 80**

*Time allowed : **3** hours* | *Maximum Marks : **80***

**ಸೂಚನೆಗಳು :** ಈ ಪ್ರಶ್ನೆ ಪತ್ರಿಕೆಯು **A, B, C** ಮತ್ತು **D** ಎಂಬ ನಾಲ್ಕು ವಿಭಾಗಗಳನ್ನೊಳಗೊಂಡಿದೆ.

ವಿಭಾಗ – **A** (ವಾಚನ ಮತ್ತು ಗ್ರಹಿಕಾ ಕೌಶಲ) : **12** ಅಂಕಗಳು

ವಿಭಾಗ – **B** (ಬರವಣಿಗೆ ಕೌಶಲ) : **15** ಅಂಕಗಳು

ವಿಭಾಗ – **C** (ಅನ್ವಯಿಕ ವ್ಯಾಕರಣ) : **18** ಅಂಕಗಳು

ವಿಭಾಗ – **D** (ಪಠ್ಯಗಳ ಅಧ್ಯಯನ) : **35** ಅಂಕಗಳು

## ವಿಭಾಗ – A

**(ವಾಚನ ಮತ್ತು ಗ್ರಹಿಕಾ ಕೌಶಲ) : 12 ಅಂಕಗಳು**

I. 1. ಈ ಗದ್ಯಭಾಗವನ್ನು ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರವನ್ನು ಬರೆಯಿರಿ.

ವನ್ಯಜೀವಿ ಸಂರಕ್ಷಣೆಯಲ್ಲಿ ಅತಿ ಮಹತ್ವದ ವಿಷಯಗಳಲ್ಲಿ ಒಂದು ವನ್ಯಜೀವಿಗಳ ಗಣತಿ. ಮಾನವ ಗಣತಿಯಂತೆ ಒಂದೊಂದಾಗಿ ಎಣಿಸಿ ಒಟ್ಟಾರೆ ಸಂಖ್ಯೆಯನ್ನು ಕಂಡುಕೊಳ್ಳಲು ಸಾಧ್ಯವಿಲ್ಲವಾದ್ದರಿಂದ ಅನೇಕ ವಿಧಾನಗಳನ್ನು ಅನುಸರಿಸಿ ಕೊನೆಗೆ ಯುಕ್ತಗಣಿತವನ್ನು ಬಳಸಿಕೊಂಡು ವೈಜ್ಞಾನಿಕವಾದ ಒಂದು ಅಂದಾಜು ಸಂಖ್ಯೆಯನ್ನು ತಲುಪಲಾಗುವುದು. ವರ್ಷಂಪ್ರತಿ ಗಣತಿಯನ್ನು ನಡೆಸುತ್ತಾ ಬಂದಾಗ ಒಂದು ಆಧಾರ ಸಂಖ್ಯೆ ದೊರೆಯುತ್ತದೆ. ಮುಂದೆ ಆ ಜೀವಿಗಳ ಸಂಖ್ಯೆ ಇದ್ದಕ್ಕಿಂತ ಹೆಚ್ಚು ಅಥವಾ ಕಡಿಮೆ ಬಂದರೆ ಕಾರಣಗಳನ್ನು ವಿಶ್ಲೇಷಿಸಲಾಗುವುದು. ಒಂದು ಜೀವಿ ಬದುಕಿ ಉಳಿಯಲು ಎಷ್ಟು ಆಹಾರ ಬೇಕು ? ಅಷ್ಟು ಆಹಾರ ಸದರಿ ಕಾಡಿನಲ್ಲಿ ಲಭ್ಯವೇ ? ಈ ಪ್ರಶ್ನೆಗಳಿಗೆಲ್ಲ ಉತ್ತರಗಳನ್ನು ಗಣತಿಯಿಂದ ಕಂಡುಕೊಳ್ಳಬಹುದು.

ಒಂದು ಹುಲಿಗಳನ್ನು ಎಣಿಸಲು ಮತ್ತೊಂದು ಬಲಿ ಪ್ರಾಣಿಗಳನ್ನು ಎಣಿಸಲು ಬೇರೆ ಬೇರೆ ಪದ್ಧತಿಗಳನ್ನು ಅನುಸರಿಸಲಾಗುತ್ತದೆ. ಬಲಿ ಪ್ರಾಣಿಗಳನ್ನು ಎಣಿಸಲು ಸೀಳುದಾರಿ ಗಣತಿ ಎಂಬ ಪದ್ಧತಿಯನ್ನು ಬಳಸಲಾಗುತ್ತದೆ. ಇನ್ನು ಬೇಟೆಗಾರ ಪ್ರಾಣಿಗಳ ಗಣತಿಗೆ ಬೇರೆ ಬೇರೆ ಪದ್ಧತಿಗಳಿವೆ. ಗುರುತು ಮತ್ತು ಚುಕ್ಕೆಗಳಿರುವ ಪ್ರಾಣಿಗಳ ಗಣತಿಗೆ ಕ್ಯಾಮರಾ ಟ್ರಾಪ್ ಸೆರೆಹಿಡಿ, ಮರು ಸೆರೆಹಿಡಿ ಪದ್ಧತಿಯನ್ನು ಬಳಸಲಾಗುತ್ತದೆ. ಈ ಪದ್ಧತಿಯನ್ನು ಅಭಿವೃದ್ಧಿ ಪಡಿಸಿದ್ದು ಕನ್ನಡಿಗರೇ ಆದ ಡಾ. ಉಲ್ಲಾಸ ಕಾರಂತರು ಎಂಬುದು ಹೆಮ್ಮೆಯ ವಿಷಯ. ಇಂದು ಈ ಪದ್ಧತಿಯನ್ನು ಜಾಗತಿಕವಾಗಿ ಗುರುತುಳ್ಳ ಪ್ರಾಣಿಗಳ ಗಣತಿಗೆ ಬಳಸಲಾಗುತ್ತಿದೆ. ಇದರ ಜೊತೆಗೆ ಗುರುತು ಚಿಹ್ನೆಗಳ ಆಧಾರದ ಮೇಲೆ ಒಂದು ಬಗೆಯ ಗಣತಿಯನ್ನು ನಡೆಸಲಾಗುತ್ತಿದೆ. ಇತ್ತೀಚೆಗೆ ಡಿಎನ್‌ಎ ಆಧಾರಿತ ಗಣತಿ ಚಾಲ್ತಿಗೆ ಬರುತ್ತಿದ್ದು ತುಂಬ ಕರಾರುವಕ್ಕಾದ ಗಣತಿ ಸಾಧ್ಯವಾಗಿದೆ.

**ಪ್ರಶ್ನೆಗಳು :**

(ಅ) ಗಣತಿಯಿಂದ ಯಾವ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬಹುದು ? **2**

(ಆ) ಜಾಗತಿಕವಾಗಿ ಬಳಸುತ್ತಿರುವ ಗಣತಿ ಪದ್ಧತಿಯನ್ನು ಅಭಿವೃದ್ಧಿ ಪಡಿಸಿದವರಾರು ? **1**

(ಇ) ಬಲಿ ಪ್ರಾಣಿಗಳ ಗಣತಿಗೆ ಯಾವ ಪದ್ಧತಿಯನ್ನು ಅನುಸರಿಸಲಾಗುತ್ತದೆ ? **1**

(ಈ) ಬೇಟೆಗಾರ ಪ್ರಾಣಿಗಳ ಗಣತಿಗೆ ಬಳಸುವ ಪದ್ಧತಿಗಳನ್ನು ಹೆಸರಿಸಿ. **2**

2. ಈ ಪದ್ಯಭಾಗವನ್ನು ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರವನ್ನು ಬರೆಯಿರಿ :

ನಾವೆಲ್ಲ ಭಾರತೀಯರೆಂಬ ಭಾವ ಮೂಡಲಿ
ನಮ್ಮಲ್ಲಿ ಭೇದ ಭಾವ ಪ್ರಭು ದೂರವಾಗಲಿ

ಒಂದು ತೋಟದಲ್ಲಿ ಹಲವು ಬಣ್ಣದ ಹೂಗಳು
ಅದರಂತೆ ನಮ್ಮ ದೇಶದಲ್ಲಿ ಹಲವು ಮತಗಳು
ಆ ಹೂಗಳಂತೆ ಮತಗಳ ಮಕರಂದ ಬೀರಲಿ
ನಮ್ಮಲ್ಲಿ ಭೇದ – ಭಾವ ಪ್ರಭು ದೂರವಾಗಲಿ

ನಾವು ಮನೆಯ ಕಟ್ಟುವಾಗ ಭೂಮಿ ಜಾತಿ ಕೇಳಿತೇ ?
ನಾವು ಶ್ವಾಸ ಎಳೆಯುವಾಗ ಗಾಳಿ ಕುಲವ ಕೇಳಿತೇ ?
ಈ ಸೃಷ್ಟಿಯಲಿ ಸರ್ವರೂ ಸಮನಾಗಿ ಬಾಳಲಿ
ನಮ್ಮಲ್ಲಿ ಭೇದ – ಭಾವ ಪ್ರಭು ದೂರವಾಗಲಿ

ಮಣ್ಣಿನಿಂದ ಆದ ಮಡಿಕೆ ಮಣ್ಣಿಗನ್ಯವೇ ?
ಚಿನ್ನದಿಂದ ಆದ ಒಡವೆ ಚಿನ್ನಗನ್ಯವೇ ?
ನಿನ್ನಿಂದ ಆದ ಜೀವರು ನಿನ್ನಂತೆ ಕಾಣಲಿ
ನಮ್ಮಲ್ಲಿ ಭೇದ – ಭಾವ ಪ್ರಭು ದೂರವಾಗಲಿ

ದಯವೇ ಧರ್ಮವೆಂಬ ಸಾರಿದಂಥ ನಾಡಿದು
ಜನಕೆ ಶಾಂತಿಪಾಠ ಹೇಳಿದಂಥ ನಾಡಿದು
ಈ ನಾಡಿನಲ್ಲಿ ಶಾಂತಿಯು ಸ್ಥಿರವಾಗಿ ನೆಲೆಸಲಿ
ನಮ್ಮಲ್ಲಿ ಭೇದ – ಭಾವ ಪ್ರಭು ದೂರವಾಗಲಿ

ಸೂರ್ಯನಂತೆ ಸಂತರು ಜಗವ ಬೆಳಗಿ ಹೋದರು
ವರುಣನಂತೆ ಜ್ಞಾನವನ್ನು ಸುರಿದು ಹೋದರು
ಗುರು ಬಸವ ನಿಮ್ಮ ಬೋಧೆ ಮನದಲ್ಲಿ ನಿಲ್ಲಲಿ
ನಮ್ಮಲ್ಲಿ ಭೇದ – ಭಾವ ಪ್ರಭು ದೂರವಾಗಲಿ

**ಪ್ರಶ್ನೆಗಳು :**

(ಅ) ಕವಿಯು ಮತಗಳನ್ನು ಯಾವುದಕ್ಕೆ ಹೋಲಿಸಿದ್ದಾರೆ ? **1**

(ಆ) ಸೃಷ್ಟಿಯಲ್ಲಿ ಹೇಗೆ ಬಾಳಬೇಕು ? **1**

(ಇ) ನಮ್ಮದು ಎಂತಹ ನಾಡಿದು ? **2**

(ಈ) ಕವಿ ಸಂತರನ್ನು ಯಾವುದಕ್ಕೆ ಹೋಲಿಸಿದ್ದಾರೆ ? **2**

## ವಿಭಾಗ – B

### (ಬರವಣಿಗೆ ಕೌಶಲ) : 15 ಅಂಕಗಳು

II. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು **150** ಪದಗಳಿಗೆ ಮೀರದಂತೆ ನಿಬಂಧವನ್ನು ಬರೆಯಿರಿ. **6**

(ಅ) ಆಕಾಶವಾಣಿ

(ಆ) ಭಾರತದ ಬಾಹ್ಯಾಕಾಶ ಕ್ಷೇತ್ರದ ಸಾಧನೆ

(ಇ) ಪುಸ್ತಕಗಳ ಮಹತ್ವ

III. ನಿಮ್ಮೂರಿನಲ್ಲಿ ನಡೆಯಲಿರುವ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಆಹ್ವಾನಿಸಿ, ನಿಮ್ಮ ಗೆಳೆಯ/ಗೆಳತಿಗೆ ಪತ್ರ ಬರೆಯಿರಿ. **5**

ಅಥವಾ

ಸರಿಯಾದ ಸಮಯಕ್ಕೆ ಬಸ್ ಪಾಸ್ ಸಿಗದಿರುವುದರಿಂದ ಆಗುತ್ತಿರುವ ಅನಾನುಕೂಲತೆಗಳನ್ನು ವಿವರಿಸಿ, ತ್ವರಿತಗತಿಯಲ್ಲಿ ಬಸ್ ಪಾಸ್ ವಿತರಿಸುವಂತೆ ವಿನಂತಿಸಿಕೊಂಡು ಸಂಬಂಧಿಸಿದ ಘಟಕ ವ್ಯವಸ್ಥಾಪಕರಿಗೆ ಪತ್ರ ಬರೆಯಿರಿ.

IV. ವರಕವಿ ದ.ರಾ. ಬೇಂದ್ರೆಯವರ ಪ್ರತಿಮೆಯ ಅನಾವರಣ ಸಮಾರಂಭದ ವರದಿಯನ್ನು ತಯಾರಿಸಿ. **4**

## ವಿಭಾಗ – C

### (ಅನ್ವಯಿಕ ವ್ಯಾಕರಣ) : 18 ಅಂಕಗಳು

V. ಈ ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರವನ್ನು ಬರೆಯಿರಿ :

1. ಕೆಳಗಿನ ಪದಗಳನ್ನು ಬಿಡಿಸಿ ಸಂಧಿಯನ್ನು ಹೆಸರಿಸಿ. **2**

   (i) ಪ್ರತ್ಯಕ್ಷ (ii) ಲೇಖನವನೋದಿ

2. ಕೆಳಗಿನ ಪದಗಳನ್ನು ವಿಗ್ರಹಿಸಿ ಸಮಾಸವನ್ನು ಹೆಸರಿಸಿ. **2**

   (i) ಪರಧನ (ii) ಮೂಗಾವುದ

3. ಕೆಳಗಿನ ಪದಗಳಿಗೆ ತತ್ಸಮ / ತದ್ಭವ ರೂಪಗಳನ್ನು ಬರೆಯಿರಿ. **1**

   (i) ವಿದ್ಯಾಧರ (ii) ಕಜ್ಜ

4. ಕೆಳಗಿನ ಪದಗಳಲ್ಲಿನ ವಿಭಕ್ತಿ – ಪ್ರತ್ಯಯ ಬರೆಯಿರಿ. **1**

(i) ಬಿರುಗಾಳಿಗೆ (ii) ಬೆಟ್ಟವನ್ನು

5. ಕೆಳಗಿನ ಪದಗಳಿಗೆ ಜೋಡುನುಡಿಯನ್ನು ಬರೆಯಿರಿ. **1**

(i) ಗುಡಿ (ii) ಕುಂದು

6. ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ. **1**

(i) ದಕ್ಷತೆ (ii) ಉನ್ನತಿ

7. ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ. **1**

(i) ಆರ್ತತೆ (ii) ಬಳಾರಿ

8. ಕೆಳಗಿನ ಪದಗಳಲ್ಲಿನ ಧಾತುಗಳನ್ನು ಗುರುತಿಸಿ ಬರೆಯಿರಿ. **1**

(i) ಕಟ್ಟುವುದು (ii) ತಿಂದನು

9. ಕೆಳಗಿನ ವಾಕ್ಯವನ್ನು ಭೂತಕಾಲಕ್ಕೆ ಪರಿವರ್ತಿಸಿ. **1**

ಮಕ್ಕಳು ಕಥೆ ಪುಸ್ತಕವನ್ನು ಓದುವರು

10. ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ. **1**

(i) ಬೇಗಬೇಗ : ದ್ವಿರುಕ್ತಿ :: ಪಟಪಟ : ______________

(ii) ದೊಡ್ಡದು : ಗುಣವಾಚಕ :: ಹಲವು : ______________

11. ಈ ವಾಕ್ಯವನ್ನು ಕರ್ಮಣಿ ವಾಕ್ಯವನ್ನಾಗಿ ಪರಿವರ್ತಿಸಿ. **1**

ನಾವು ನಮ್ಮೂರ ಜಾತ್ರೆಯನ್ನು ಸಡಗರದಿಂದ ಮಾಡಿದೆವು.

12. ಈ ವಾಕ್ಯವನ್ನು ನಿಷೇದಾರ್ಥಕ ರೂಪಕ್ಕೆ ಪರಿವರ್ತಿಸಿ. **1**

ಗುಣವಂತರು ದುಷ್ಟರ ಗೆಳೆತನವನ್ನು ಮಾಡುವರೇ ?

13. ಕೆಳಗಿನ ಪದ/ಪಡೆನುಡಿಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಉಪಯೋಗಿಸಿ ಬರೆಯಿರಿ. **2**

(i) ಕೈಹಾಕು (ii) ಕಕ್ಕಾಬಿಕ್ಕಿ

14. ಕೆಳಗಿನ ಯಾವುದಾದರೂ ಒಂದು ಗಾದೆಯನ್ನು ವಿವರಿಸಿ. **2**

(i) ಮಿಂಚಿ ಹೋದ ಕಾರ್ಯಕ್ಕೆ ಚಿಂತಿಸಿ ಫಲವಿಲ್ಲ

(ii) ಕಾಸಿಗೆ ತಕ್ಕ ಕಜ್ಜಾಯ

## ವಿಭಾಗ – D

## (ಪಠ್ಯಗಳ ಅಧ್ಯಯನ) : 35 ಅಂಕಗಳು

VI. ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. **1 × 10 = 10**

1. ಸರ್ ಎಂ. ವಿ. ಅವರು ಪ್ರಾಥಮಿಕ ಶಿಕ್ಷಣದ ನಿಬಂಧನೆಯನ್ನು ಜಾರಿಗೆ ತಂದದ್ದು

   (i) 1923 ರಲ್ಲಿ (ii) 1913 ರಲ್ಲಿ

   (iii) 1903 ರಲ್ಲಿ (iv) 1943 ರಲ್ಲಿ

2. ಕ್ರಿ.ಶ. 12 ನೇ ಶತಮಾನದಲ್ಲಿ ಕ್ರಾಂತಿ ಉಂಟುಮಾಡಿದ ಸಾಹಿತ್ಯವಿದು

   (i) ದಾಸ ಸಾಹಿತ್ಯ (ii) ಹಳಗನ್ನಡ ಸಾಹಿತ್ಯ

   (iii) ಬಂಡಾಯ ಸಾಹಿತ್ಯ (iv) ವಚನ ಸಾಹಿತ್ಯ

3. ದುಷ್ಟಬುದ್ಧಿಯ ತಂದೆಯ ಹೆಸರು

   (i) ಪ್ರೇಮವತಿ (ii) ವಿಷ್ಣುದತ್ತ

   (iii) ದಯಾನಿಧಿ (iv) ಗುಣಾಢ್ಯ

4. 'ಸ್ವಧರ್ಮೇ ನಿಧನಂ ಶ್ರೇಯ' ಎಂದು ಈ ಗ್ರಂಥದಲ್ಲಿ ಹೇಳಿದೆ

   (i) ಭಗವದ್ಗೀತೆಯಲ್ಲಿ (ii) ಮಹಾಭಾರತದಲ್ಲಿ

   (iii) ರಾಮಾಯಣದಲ್ಲಿ (iv) ಋಗ್ವೇದದಲ್ಲಿ

5. ರೈತರಿಂದ ಸಂಗ್ರಹಿಸಿದ ಕಂದಾಯದ ಮೊತ್ತವನ್ನು ಖಜಾನೆಗೆ ಸಲ್ಲಿಸುವುದೇ

   (i) ಇರಸಾಲು (ii) ಸಂದಾಯ

   (iii) ವಂತಿಗೆ (iv) ಕೈಸಾಲು

6. ಕಲುಷಿತವಾಗಿರುವ ನದೀಜಲಗಳಿಗೆ ಈ ಮಳೆಯಾಗಬೇಕೆಂದು ಕವಿ ಹೇಳಿದ್ದಾರೆ

   (i) ಜಡಿಮಳೆ (ii) ಕಾರ್ಮೋಡದ

   (iii) ಮುಂಗಾರಿನ (iv) ಹಿಂಗಾರಿನ

7. ‘ಮಹಾಭಾರತ’ ಯುದ್ಧದಲ್ಲಿ ಮಾರಿಗೆ ಔತಣ ಮಾಡುವೆ ಎಂದವರು

(i) ಅರ್ಜುನ (ii) ಭೀಮ

(iii) ದುರ್ಯೋಧನ (iv) ಕರ್ಣ

8. ಅಶ್ವಮೇಧ ಕುದುರೆಯ ಬೆಂಗಾವಲಿಗೆ ಬಂದವರು

(i) ಲಕ್ಷ್ಮಣ (ii) ಭರತ

(iii) ಶತ್ರುಘ್ನ (iv) ಸುಮಂತ

9. ಮಾನವ ಎಂಬೋನು ಇದಕ್ಕೆ ಮಾಲೀಕ

(i) ಹಣಕ್ಕೆ (ii) ಬಂಗಾರಕ್ಕೆ

(iii) ಮಣ್ಣಿಗೆ (iv) ಸಂಪತ್ತಿಗೆ

10. ಒಡಲು ಅನುಭವಿಸುವ ………… ಕೆ ಗಡಿಯೂ ಇಲ್ಲ

(i) ಸಂಕಟ (ii) ಆನಂದ

(iii) ಉತ್ಸಾಹ (iv) ಕೋಪ

VII. ಈ ಕೆಳಗಿನ ಪ್ರಶ್ನೆಗಳಿಗೆ **5 – 6** ವಾಕ್ಯಗಳಲ್ಲಿ ಉತ್ತರವನ್ನು ಬರೆಯಿರಿ : **3 × 4 = 12**

1. ಎಂಜನೀಯರ್‌ಗಳಿಗೆ ವಿಶ್ವೇಶ್ವರಯ್ಯ ಅವರು ಏನೆಂದು ಮಾರ್ಗದರ್ಶನ ಮಾಡಿದರು ?

2. ಸಂದರ್ಭದೊಂದಿಗೆ ಸ್ವಾರಸ್ಯವನ್ನು ವಿವರಿಸಿ.

   “ಹುಸಿಯದ ಬೇಹಾರಿಯೇ ಇಲ್ಲ”

   **ಅಥವಾ**

   “ನಾನು ಮುಖ ಮೇಲಾಗಿ ಬಿದ್ದಿದ್ದೆನೆ ?”

3. ಸಂದರ್ಭದೊಂದಿಗೆ ಸ್ವಾರಸ್ಯವನ್ನು ವಿವರಿಸಿ.

   “ಜೀಯ ಹಸಾದವೆಂಬುದು ಕಷ್ಟ”

   **ಅಥವಾ**

   “ಜೀವ ತೆಗೆದವರು ವೀರ ಯೋಧರಾದರು”

4. ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ ಏನೆಂದು ಬರೆಯಲಾಗಿತ್ತು ?

VIII. ಕೆಳಗಿನ ಪ್ರಶ್ನೆಗಳಿಗೆ **7 – 8** ವಾಕ್ಯಗಳಲ್ಲಿ ಉತ್ತರವನ್ನು ಬರೆಯಿರಿ. **4 × 2 = 8**

1. ಕವಿ ಸಿದ್ಧಲಿಂಗಯ್ಯ ಹೇಳಿದ ಕಥೆಯನ್ನು ಬರೆಯಿರಿ.

**ಅಥವಾ**

'ವೃಕ್ಷಸಾಕ್ಷಿ' ಗದ್ಯದಲ್ಲಿ ನೀವು ಮೆಚ್ಚುವ ಪಾತ್ರ ಯಾವುದು ? ಮತ್ತು ಏಕೆ ?

2. ನಾವು ಯಾವ ಸಂಕಲ್ಪ ಕೈಕೊಳ್ಳಬೇಕೆಂದು ಕವಿ ಶಿವರುದ್ರಪ್ಪನವರ ಆಶಯ ?

**ಅಥವಾ**

ಪಾಂಡವರು ಸೋದರರೆಂದು ತಿಳಿದಾಗ ಕರ್ಣನ ಮನಃಸ್ಥಿತಿಯೇನಾಯಿತು ? ಅವನು ಅದನ್ನು ಮೆಟ್ಟಿ ನಿಂತು ಹೇಗೆ ಪ್ರತಿಕ್ರಿಯಿಸಿದನು ?

**(ಪಠ್ಯಪೋಷಕ ಅಧ್ಯಯನ)**

IX. ಈ ಕೆಳಗಿನ ಪ್ರಶ್ನೆಗಳಿಗೆ **ಒಂದೆರಡು** ವಾಕ್ಯಗಳಲ್ಲಿ ಉತ್ತರವನ್ನು ಬರೆಯಿರಿ. **1 × 5 = 5**

1. ಲೇಖಕರ ಪ್ರಕಾರ 'ವಿಶ್ವಧರ್ಮ' ಯಾವಾಗ ರೂಪಿತವಾಗಬಲ್ಲದು ?
2. ಬಿಳಿಯ ಕೊಳ ಎಲ್ಲಿದೆ ?
3. ರಾಜಕೀಯ ಸ್ವಾತಂತ್ರ್ಯದ ಮಹತ್ವವೇನು ?
4. ಅಂದವಾದ ಬರವಣಿಗೆಯ ಬಗ್ಗೆ ಗಾಂಧೀಜಿಯವರ ಅಭಿಪ್ರಾಯವೇನು ?
5. ಒಗಟುಗಳಿಂದ ಶೈಕ್ಷಣಿಕವಾಗಿ ಏನು ಲಾಭ ?

---